**ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ**

**ಸಿ.ಸಿ. ನಂಃ 669/2021**

**ಫಿರ್ಯಾದಿ** : ಸರ್ಕಾರದ ಪರವಾಗಿ – ಚಿತ್ರಹಳ್ಳಿಗೇಟ್ ಪೋಲೀಸರು.

– ವಿರುದ್ಧ –

**ಆರೋಪಿತರುಃ** ಸತೀಶ ಮತ್ತು ಇತರರು.

**–:: ದೋಷಾರೋಪಣೆ ::–**

ನಾನು ನಿರುಪಮಾ ರೇಣಕಪ್ಪ ಢಂಗ, ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ, ಆದ ನಾನು ನಿಮ್ಮ ಮೇಲೆ ಅಂದರೆ,

1. ಸತೀಶ ತಂದೆ ಪಾಂಡು,
   ಸು.23 ವರ್ಷಗಳು,
   ವಾಸಃ ಬೊಮ್ಮೇನಹಳ್ಳಿ ಗ್ರಾಮ,
   ಹಿರೇಗುಂಟನೂರು ಹೋಬಳಿ,
   ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ.

2. ಸಚಿನ್ ತಂದೆ ನಾರಾಯಣಪ್ಪ,
   ಸು.22 ವರ್ಷಗಳು,
   ವಾಸಃ # ನಂ.533, ಧರ್ಮಾವರಂ ಬೀದಿ,
   ಚಿಕ್ಕನಾಯಕನಹಳ್ಳಿ ಟೌನ್,
   ತುಮಕೂರು ಜಿಲ್ಲೆ.

3. ಮೊಹಮ್ಮದ್ ಸಾದಿಖ್ ವುಲ್ಲಾ ತಂದೆ ಅಬ್ದುಲ್ ರಷೀದ್,
   ಸು.33 ವರ್ಷಗಳು,
   ವಾಸಃ ಮಸೀದಿ ಆಜಂ ಹತ್ತಿರ, ಹೊರಪೇಟೆ,
   ಚಿತ್ರದುರ್ಗ ಟೌನ್.

**ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ, ದಿನಾಂಕಃ 10.08.2019 ರಂದು ಬೆಳಗಿನ ಜಾವ 01.00 ಎ.ಎಂ ಗಂಟೆಯಿಂದ 02.15 ಎ.ಎಂ ಗಂಟೆಯ ಮಧ್ಯೆ ಟಿ.ನುಲೇನೂರು ಗೇಟ್ ನಲ್ಲಿ ರಿ.ಸ.ನಂ.30/1 ರ ಜಮೀನಿನ ಅಡಿಕೆ ತೋಟದಲ್ಲಿ ಅಳವಡಿಸಿರುವ TNLNR-1 IN

1291342 ನೇ ಸೈಟಿನ ಟವರ್ ನಲ್ಲಿ ಅಳವಡಿಸಿದ್ದ ಸುಮಾರು 1,60,000/- ರೂ ಮೌಲ್ಯದ ಅಮರರಾಜ ಕಂಪನಿಯ 600 ಎ.ಹೆಚ್ ನ 24 ಬ್ಯಾಟರಿ ಶೆಲ್ ಗಳನ್ನು ಆರೋಪಿತರಾದ ನೀವುಗಳು ಕಳ್ಳತನ ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 379 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕಳ್ಳತನ ಮಾಡುವ ಸಮಾನ ಉದ್ದೇಶದಿಂದ, 1 ನೇ ಆರೋಪಿ ಮತ್ತು 2 ನೇ ಆರೋಪಿತರ ಪ್ರಚೋದನೆಯಿಂದ ಅಡಿಕೆ ತೋಟದಲ್ಲಿ ಅಳವಡಿಸಿರುವ TNLNR-1 IN 1291342 ನೇ ಸೈಟಿನ ಟವರ್ ನಲ್ಲಿ ಅಳವಡಿಸಿದ್ದ ಸುಮಾರು 1,60,000/- ರೂ ಮೌಲ್ಯದ ಅಮರರಾಜ ಕಂಪನಿಯ 600 ಎ.ಹೆಚ್ ನ 24 ಬ್ಯಾಟರಿ ಶೆಲ್ ಗಳನ್ನು ಆರೋಪಿತರಾದ ನೀವುಗಳು ಕಳ್ಳತನ ಮಾಡಿರುತ್ತೀರಿ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 109 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುತ್ತೀರಿ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

14/11/2022

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹೊಳಲ್ಕೆರೆ.

ದಿಃ **14.11.2022**